ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 21 ಇಎಸ್‌ಟಿ(8) 2022

**ಆಯುಕ್ತರ ಕಛೇರಿ,**
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001,
ದಿನಾಂಕ:09-08-2024

## ಅಧಿಸೂಚನೆ

ವಿಷಯ: ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ (HK) ಮೀಸಲಿರಿಸಿದ ಹುದ್ದೆಗಳೆದುರಾಗಿ ಕಾರ್ಯನಿರ್ವಹಿಸುತ್ತಿರುವ ಉಳಿದ ಮೂಲವೃಂದದ (RK) ಬೋಧಕ ಸಿಬ್ಬಂದಿಯನ್ನು ಸ್ಥಳಾಂತರ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 206 ಡಿಟಿಇ 2014 ದಿನಾಂಕ:22-04-2015.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 136 ಡಿಟಿಇ 2022 ದಿನಾಂಕ:11-01-2023.
3. ಈ ಕಛೇರಿ ಅಧಿಸೂಚನೆ ಸಂಖ್ಯೆ: ಡಿಟಿಇ 21 ಇಎಸ್‌ಟಿ(8) 2022 ದಿನಾಂಕ:03-02-2023.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 137 ಡಿಟಿಇ 2020, ದಿನಾಂಕ: 29-01-2021.
5. ಈ ಕಛೇರಿ ಹಿಂಬರಹ ಸಂಖ್ಯೆ: ಡಿಟಿಇ 21 ಇಎಸ್‌ಟಿ(8) 2022/1356 ದಿನಾಂಕ:01-02-2024.
6. ಸರ್ಕಾರದ ಪತ್ರ ಸಂಖ್ಯೆ: ಇಡಿ 98 ಡಿಟಿಇ 2024 ದಿನಾಂಕ: 04-07-2024.
7. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 98 ಡಿಟಿಇ 2024 ದಿನಾಂಕ: 07-08-2024.

** ** **

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಭಾರತದ ಸಂವಿಧಾನದ ಅನುಚ್ಛೇಧ 371 (ಜೆ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರಲ್ಲಿ ಹೊರಡಿಸಿರುವ ಕಲ್ಯಾಣ-ಕರ್ನಾಟಕ ಪ್ರದೇಶದ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು/ ಪಾಲಿಟೆಕ್ನಿಕ್ / ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಒಟ್ಟಾರೆ ಒಂದು ಹುದ್ದೆ ಮಂಜೂರಾಗಿದ್ದಲ್ಲಿ ಮೀಸಲಾತಿ ಕಲ್ಪಿಸದೆ. ಗ್ರೂಪ್-ಎ (ಕಿರಿಯ ಶ್ರೇಣಿ) ಮತ್ತು ಗ್ರೂಪ್-ಬಿ ವೃಂದಗಳಲ್ಲಿ, ಶೇ.75 ರಷ್ಟು, ಗ್ರೂಪ್-ಸಿ ವೃಂದದಲ್ಲಿ ಶೇ.80 ರಷ್ಟು ಹಾಗೂ ಗ್ರೂಪ್-ಡಿ ವೃಂದದಲ್ಲಿ ಶೇ.85 ರಷ್ಟು ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಿ ಹಾಗೂ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ (ಕೇಂದ್ರ ಕಛೇರಿ) ಬೆಂಗಳೂರು ಹಾಗೂ ರಾಜ್ಯದ ರಾಜದಾನಿ (ಬೆಂಗಳೂರು ನಗರದ ಬಿ.ಬಿ..ಎಂ.ಪಿ ವ್ಯಾಪ್ತಿ) ಪ್ರದೇಶದಲ್ಲಿನ ತಾಂತ್ರಿಕ. ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಂಸ್ಥೆಗಳಲ್ಲಿನ ಗ್ರೂಪ್-ಎ (ಕಿರಿಯ ಶ್ರೇಣಿ) ರಿಂದೆ ಗ್ರೂಪ್-ಡಿ ವೃಂದಗಳಲ್ಲಿ ಶೇ.8 ರಷ್ಟು ಹುದ್ದೆಗಳನ್ನು ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಿ ಅಧಿಸೂಚಿಸಲಾಗಿದೆ.

ಉಲ್ಲೇಖ (2) ರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ (HK) ಮೀಸಲಿರಿಸಿದ ಹುದ್ದೆಗಳೆದುರಾಗಿ ಕಾರ್ಯನಿರ್ವಹಿಸುತ್ತಿರುವ ಉಳಿದ ಮೂಲವೃಂದದ (RK) ಬೋಧಕ ಸಿಬ್ಬಂದಿಯನ್ನು ಸ್ಥಳಾಂತರಿಸುವ ಸಂಬಂಧ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013 ರ ಕಂಡಿಕೆ 5(d) ರಂತೆ ಪರಿಶೀಲಿಸಿ ಕ್ರಮ ವಹಿಸುವಂತೆ ತಿಳಿಸಲಾಗಿದೆ.

ಉಲ್ಲೇಖ (6) ರ ಅಧಿಸೂಚನೆ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ) ನಿಯಮಗಳು-2021 ರ ನಿಯಮ 8 ರನ್ವಯ ಬೋಧಕ ವರ್ಗಾವಣೆಯನ್ನು ದಿನಾಂಕ:31-07-2024 ರ ಒಳಗಾಗಿ ಪೂರ್ಣಗೊಳಿಸಲು ತಿಳಿಸಲಾದ ಆದೇಶವನ್ನು ಮಾರ್ಪಡಿಸಿ ಉಲ್ಲೇಖ (7) ರ ಅಧಿಸೂಚನೆಯಲ್ಲಿ 2024-25 ನೇ ಸಾಲಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಬೋಧಕ ಸಿಬ್ಬಂದಿಗಳ ವರ್ಗಾವಣೆ ಪ್ರಕ್ರಿಯೆಯನ್ನು ದಿನಾಂಕ: 15-08-2024 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಈ ಹಿನ್ನಲೆಯಲ್ಲಿ, ಉಲ್ಲೇಖ (1) ನಿಯಮಗಳಲ್ಲಿ ಕಲ್ಪಿಸಲಾಗಿರುವ ಅವಕಾಶದಂತೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಬೋಧಕ ವರ್ಗದವರು ದಿನಾಂಕ: 09-08-2024 ರಂದು ನಡೆದ ವರ್ಗಾವಣೆ ಕೌನ್ಸಿಲಿಂಗ್‌ನಲ್ಲಿ ಆಡಳಿತಾತ್ಮಕ ಹಿತಾಸಕ್ತಿಮೇರೆಗೆ ಸ್ಥಳ ಆಯ್ಕೆ ಮಾಡಿಕೊಂಡಿರುತ್ತಾರೆ. ತತ್ಸಂಬಂಧ ಅನುಬಂಧದಲ್ಲಿ ನೀಡಿರುವಂತೆ ಬೋಧಕರ ಹೆಸರಿನ ಮುಂದೆ ನಮೂದಿಸಿರುವ ಸಂಸ್ಥೆಗೆ ವರ್ಗಾಯಿಸಿ ಆದೇಶಿಸಿದೆ

ಸೂಚನೆ:

1. ವರ್ಗಾವಣೆಗೊಂಡ ಬೋಧಕ ವರ್ಗದವರನ್ನು ದಿನಾಂಕ: 10-08-2024 ರ ಅಪರಾಹ್ನ ಸಂಸ್ಥೆಯ ಕರ್ತವ್ಯದಿಂದ ನೇರವಾಗಿ ಬಿಡುಗಡೆಗೊಳಿಸಲಾಗಿದೆ ಹಾಗೂ ವರ್ಗಾವಣೆ ಆದೇಶದ ಪ್ರತಿಯೊಂದಿಗೆ ವರ್ಗಾವಣೆಗೊಂಡ ಸಂಸ್ಥೆಗೆ ವರದಿ ಮಾಡಿಕೊಳ್ಳಲು ಆದೇಶಿಸಲಾಗಿದೆ;
2. ಸಾರ್ವಜನಿಕ ಹಿತದೃಷ್ಟಿ ಮೇರೆಗೆ ವರ್ಗಾವಣೆಗೊಂಡ ಬೋಧಕ ವರ್ಗದವರು ಕೆ.ಸಿ.ಎಸ್.ಆರ್ ನಿಯಮಗಳಂತೆ ನಿಯಮಾನುಸಾರ ಅನ್ವಯವಾಗುವ ಸೇರಿಕೆ ಕಾಲ ಹಾಗೂ ವರ್ಗಾವಣೆ ಭತ್ಯೆಗೆ ಅರ್ಹರಿರುತ್ತಾರೆ;
3. ವರ್ಗಾವಣೆ ಹೊಂದಿದ ಬೋಧಕ ವರ್ಗದವರು ಆಗಸ್ಟ ಮಾಹೆಯ ದಿನಾಂಕ:10-08-2024 ರಿಂದ ನಂತರದ ವೇತನ ಭತ್ಯೆಯನ್ನು ಅವರನ್ನು ವರ್ಗಾಯಿಸಿದ ಸಂಸ್ಥೆಯಲ್ಲಿ ಪಡೆಯತಕ್ಕದ್ದು;
4. ವರ್ಗಾವಣೆ ಹೊಂದುವ ಬೋಧಕ ವರ್ಗದವರು ಸಂಸ್ಥೆಯ ಪ್ರಾಂಶುಪಾಲರ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದಲ್ಲಿ, ಸಂಸ್ಥೆಯ ಹಿರಿಯ ಬೋಧಕ ವರ್ಗದವರಿಗೆ ಪ್ರಾಂಶುಪಾಲರ ಕಾರ್ಯಭಾರವನ್ನು ವಹಿಸಿಕೊಡತಕ್ಕದ್ದು.

**ಟಿಪ್ಪಣಿ ಮಾನ್ಯ ಆಯುಕ್ತರಿಂದ**
**ಅನುಮೋದಿಸಿದೆ**

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**

1. ಅನುಬಂಧದಲ್ಲಿನ ಬೋಧಕ ವರ್ಗದವರಿಗೆ (ಸಂಬಂಧಪಟ್ಟ ಪ್ರಾಂಶುಪಾಲರ ಮೂಲಕ).
2. ಸಂಬಂಧ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು :**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು;
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು – ಮಾಹಿತಿಗಾಗಿ;
3. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು – ಮಾಹಿತಿಗಾಗಿ;
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
5. ಜಂಟಿ ನಿರ್ದೇಶಕರು (ಆಡಳಿತ)/(ಸಿಡಿಸಿ)/(ತನಿಖೆ)/(ಪರೀಕ್ಷೆ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
6. ಆಡಳಿತಾಧಿಕಾರಿ / ರಿಜಿಸ್ಟ್ರಾರ್(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
7. ಇ- ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು);
8. ಡಿವಿಪಿ (1) ಮತ್ತು (2), ಇಎಸ್‌ಟಿ (1), (3), (5), (7), (9) ಮತ್ತು (10) ವಿಭಾಗಗಳಿಗೆ.
9. ಆಯುಕ್ತರ ಆಪ್ತ ಶಾಖೆಗೆ;
10. ಕಛೇರಿ ಪ್ರತಿ.

| ಅನುಬಂಧ | | | | | | | | |
|---|---|---|---|---|---|---|---|---|
| **SL. NO.** | **Emp Id** | **Emp Name** | **Designation** | **College Name** | **CRSNAME** | **HK Claimed** | **TRANSFERD COLLEGE** | **PUBLIC INTEREST** |
| **1** | 2530113 | NAGARAJ B PATIL | ASST, PROFESSOR (GROUP-A) | Government Engineering College, Hoovina Hadagali | COMPUTER SCIENCE AND ENGG | Y | Govt.S K S J T Institute of Engineering, Bangalore | **PUBLIC INTEREST** |
| 2 | 2511286 | DR SATHISHA N | ASST. PROFESSOR (GRP-B) | Govt.S K S J T Institute of Engineering, Bangalore | ELECTRONICS & COMMUNICATION | N | Government Engineering College, Krishnarajpet, Mandya | **PUBLIC INTEREST** |

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ